ಶ್ರೀ ಪಿ. ಜಿ. ಸಿದ್ಧಾಂತಿ.—ಹೆಡ್ ಕ್ವಾರ್ಟರ್ ಅಸಿಸ್ಟೆಂಟ್ ಮತ್ತು ನಬ್ ಡಿವಿಜ್ಞ್ ಅಸಿಸ್ಟೆಂಟ್ ಕಮಿಷನರ ಕೆಲಸ ಇವೆರಡೂ ಒಂದುಗೂಡಿರುವುದನ್ನು ಬೇರೆ ಮಾಡಲಕ್ಕೆ ರೆಕಮಂಡ್‌ಮಾಡಿ ಬಹಳ ದಿವಸ ಆಯ ತು ಎಂಬ ದು ಗೊತ್ತ್ರೇ ?

ಶ್ರೀ ಕಡಿದಾಳ್ ಮಂಜಪ್ಪ.—ಇತ್ತೀಚೆಗೆ ಅಂತಿಮ ಶಿಫಾರಸು ಬಂದಿದೆ, ಅದನ್ನು ಪರಿಶೀಲನೆ ಮಾಡುತ್ತಾ ಇದ್ದೇವೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಬಾಗಲಕೋಟೆ ನಬ್ ಡಿವಿಜ್ಞ್‌ಗೆ ಡೆವಲಪ್‌ಮೆಂಟ್ ಬ್ಲಾಕು ಇದೆ. ಆದಕಾರಣ ತ ಸೀಲ್‌ದಾರರು ಹೋಗುವುದಕ್ಕೆ ಶಕ್ಯವಿಲ್ಲ, ಅಸಿಸ್ಟೆಂಟ್ ಕಮಿಷನರೇ ಹೋಗಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ತಹಸಿಲ್‌ದಾರರು ಬೇರೆ, ಬ್ಲಾಕ್ ಡೆವಲಪ್‌ಮೆಂಟ್ ಆಫೀಸರು ಬೇರೆ ಇರುತ್ತಾರೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಅಲ್ಲಿಗೆ ಅಸಿಸ್ಟೆಂಟ್ ಕಮಿ ನರು ಹೋಗಲು ಬೇರೆ ದಾರಿಯೇ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವಾಗಲಾದರೂ ಒಂದೊಂದು ಸಾರಿ ನದಿ ಪ್ರವಾಹದಲ್ಲಿ ಇದ್ದಾಗ ಹೋಗುವುದಕ್ಕಾಗುವುದಿಲ್ಲ. ಬಾಕಿನಮಯದಲ್ಲಿ ಹೋಗುವುದಕ್ಕಾಗುತ್ತದೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಹೋಗುವುದಕ್ಕೆ ಆಗುವು ದಿಲ್ಲ, ಆದಕಾರಣ ತಾವು ಪರಿಶೀಲನೆ ಮಾಡಬೇಕು. ಅದರಿಂದ ಖರ್ಚೂ ಸಹಿತ ಡಾಸ್ತಿ ಆಗುವ ದಿಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಮೂರು ಸೂಚನೆಗಳು ಬಂದಿವೆ. ನಾಲ್ಕ ಡಿವಿಜ್ಞ್ ಇರುವುದನ್ನು ಮೂರು ಡಿವಿಜ್ಞ್ ಮಾಡಬೇಕೆಂಬುದು ಒಂದು ಸಲಹೆ; ಇನ್ನೊಂದು ಆಗ್ರಿಕಲ್ಚರಲ್ ಇಕಂಟ್ಯಾಕ್ಟ್ ಆಫೀಸರ್ ಹುದ್ದೆಯನ್ನು ರದ್ದುಮಾಡಿ, ಆಗ್ರಿಕಲ್ಚರರ್ ಇಕಂಟ್ಯಾಕ್ಟ್ಸ್ ಆಫೀಸರ್ ಹುದ್ದೆಯನ್ನು ರದ್ದುಮಾಡಿ, ಆಗ್ರಿಕಲ್ಚರರ್ ಇಕಂಟ್ಯಾಕ್ಟ್ಸ್ ಅಸೆಸ್ ಮಾಡತಕ್ಕ ಕರ್ತವ್ಯವನ್ನು ಅಸಿಸ್ಟೆಂಟ್ ಕಮಿಷನರಿಗೆ ವಹಿಸುವುದು ಎಂದುಹೇಳಿ, ಮೂರನೆಯದು ಈಗಿರತಕ್ಕ ಬಿಜಾಪುರ ನಬ್‌ಡಿವಿಜ್ಞ್‌ಗೆ ಇನ್ನೂ ಒಂದು ತಾಲ್ಲೂಕನ್ನು ಸೇರಿಸಿ, re-adjust ಮಾಡುವುದು ಎಂದು. ಈ ಎಲ್ಲಾ ಸೂಚನೆಗಳೂ ಸರ್ಕಾರದ ಪರಿಶೀಲನೆಯಲ್ಲಿವೆ.

ಶ್ರೀ ಪಿ. ಜಿ. ಸಿದ್ಧಾಂತಿ.—ಹಳೆಯ ಮೈಸೂರಿನಲ್ಲಿ ಒಂದು ಸಾವಿರ ಚದರ ಮೈಲಿಗಿಂತ ಕಡಿಮೆ ಇದ್ದರೂ ಅಸಿಸ್ಟೆಂಟ್ ಕಮಿಷನರನು ಕೊಟ್ಟಿದ್ದೀರಿ ನಮ್ಮಲ್ಲಿ ಮಾತ್ರ 1,700, 2,000 ಚದರ ಮೈಲಿ ಇದ್ದರೂ ಕೊಟ್ಟಿಲ್ಲ. ಈ ರೀತಿ ಭೇದವಿದೆ. ಆದಕಾರಣ ದಯವಿಟ್ಟು ಇದನ್ನು ಕೂಡಲೇ ಪರಿಶೀಲನೆ ಮಾಡುತ್ತೀರಾ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ನಾವೇನೂ ಭೇದಮಾಡಿಲ್ಲ. ಹಿಂದಿನ ಪರಂಪರೆಯನ್ನೇ ನೆಡೆಸಿಕೊಂಡು ಬರುತ್ತಾ ಇದ್ದೇವೆ.

Publication of "Karnatak Through Ages".

*Q—89. Sri A. J. DODDAMETI (Ron).—

Will the Government be pleased to state :—

(*a*) whether they intend to publish the work entitled "Karnatak through Ages";

(*b*) if so, the steps taken by them so far in this regard ?

A.—Sri ANNA RAO GANAMUKHI (Minister for Education).—

(*a*) Yes.

(*b*) The matter is under the active consideration of Government.

ಶ್ರೀ ಎ. ಜೆ. ದೊಡ್ಡಮೇಟಿ.—Active consideration ನಲ್ಲಿ ಇದೆ ಎಂದು ಹೇಳಿದ್ದೀರಿ. ಇದರ ಅರ್ಥ ಬಹುಶಃ ಒಂದು ಸಿದ್ಧತೆಗೆ ಬಂದಿದೆ ಎಂದು ಆಗುತ್ತದೆ. ಅದ ಖರ್ಚು ಎಷ್ಟು, ಅದರ ಪುಟಗಳು ಎಷ್ಟಾಗ ಬಹುದು ಅದನ್ನುಯಾವ ಸ್ವರೂಪದಲ್ಲಿ ಹೊರಪಡಿಸುತ್ತೀರಿ ಎಂಬ ವಿವರಣೆಯನ್ನು ಕೊಡುತೀರಾ ?

†ಶ್ರೀ ಅಣ್ಣಾರಾವ್ ಗಣಮುಖಿ.—ವಿವರ ಹೀಗಿದೆ. ಇದು ಸಾಧಾರಣ 1,000 ಪುಟ ಇರತಕ್ಕ ಪುಸ್ತಕ ಇದರ ಖರ್ಚು 75,000 ರೂಪಾಯಿ ಆಗುತ್ತದೆ. ಇಂಗ್ಲೀಷ್ ಭಾಷೆಯಲ್ಲಿ ಇರುತ್ತದೆ.

ಶ್ರೀ ಜಿ. ವೆಂಕಟೇಗೌಡ.—ಅದರ ಆಥರ್ಸ್ ಯಾರು?

ಶ್ರೀ ಅಣ್ಣಾರಾವ್ ಗಣಮುಖಿ.—ಬೇರೆ ಬೇರೆ ಆಥರ್ಸ್‌ಗಳಿಂದ ವಿಷಯ ತೆಗೆದ-ಕೊಳ್ಳಲಾಗುವುದು. "ಬಿಹಾರ್ ಥ್ರೂ ಏಜಿಸ್" ಎಂದು ಹೇಳಿ ಒಂದು ಪುಸ್ತಕ ಇಲ್ಲ ನನ್ನ ಹತ್ತರ ಇದೆ. ಇದರ ಹಾಗೆಯೇ ಅದೂ ಇರುತ್ತದೆ.

Sri V. P. DEENADAYLU NAIDU.—Is the whole thing narrated there a correct version or is it something which is going to be proscribed tomorrow ?

Sri ANNA RAO GANAMUKHI.—The book I just now showed to the House is only to indicate the size of the book that we are proposing to have.

Sri G. VENKATAI GOWDA.—What are the various things that would be printed in that book ?

Sri ANNA RAO GANAMUKHI.—It is more or less a historical survey of the political affairs, administration, social artistic, and cultural developments from ages.

ಶ್ರೀ ಟಿ. ಆರ್. ಪರಮೇಶ್ವರಪ್ಪ.—ಈ ಪುಸ್ತಕದ ಟೈಟಲ್ ಏನು ? "Karnataka Through Ages" ಅಂತಲೇ "Mysore Through Ages" ಅಂತಲೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಇಲ್ಲಿ ಹೆಸರು "Karnataka Through Ages" ಎಂದು ಹಾಕಿದ್ದಾರೆ. ನಿರ್ಣಯವನ್ನು ಇನ್ನೂ ತೆಗೆದುಕೊಂಡಿಲ್ಲ.

ಶ್ರೀ ಎ. ಜೆ. ದೊಡ್ಡಮೇಟಿ.—ಈಗ "ಬಿಹಾರ್ ಥ್ರೂ ಏಜಸ್" ಅನ್ನುವ ಪುಸ್ತಕ ತಮ್ಮ ಲಕ್ಷ್ಯಕ್ಕೆ ಬಂದಿದೆ ಎಂದು ಹೇಳಿದಿರಿ. ಅದರಲ್ಲಿ ಭಾರತದ ಪ್ರಧಾನಿಗಳು ಈ ಬಗೆಯ ಪುಸ್ತಕಗಳನ್ನು ಎಲಾ ಸ್ಟೇಟ್ಸ್ ನವರೂ ಪ್ರಸಿದ್ಧಮಾಡುವುದು ಅವಶ್ಯಕ ಎಂದು ಹೇಳಿ ಅವರು ಮುನ್ನುಡಿಯಲ್ಲಿ ಬರೆದಿರುವುದು ತಮ್ಮ ಲಕ್ಷ್ಯಕ್ಕೆ ಬಂದಿದೆಯೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಅದರಲ್ಲೇ ಇದೆಯಲ್ಲಾ.